# ಪಶ್ಚಾತ್ತಾಪ

■ ವಿ. ಹೇಮಂತಕುಮಾರ, ಬೆಂಗಳೂರು

ಒಂದು ದಿನ ಬೆಳಿಗ್ಗೆ ರವೀಂದ್ರನಾಥ ಟ್ಯಾಗೋರರ ಸೇವಕ ಕೆಲಸಕ್ಕೆ ಹಾಜರಾಗಲಿಲ್ಲ, ಅವರು ರಾತ್ರಿ ಮನೆಯಲ್ಲಿ ಇರಲಿಲ್ಲ. ಬಾಗಿಲುಗಳೆಲ್ಲಾ ತೆಗೆದೇ ಇದ್ದವು. ಬಾವಿಯಿಂದ ನೀರು ಸೇದಿರಲಿಲ್ಲ. ಬೆಳಗಿನ ಉಪಾಹಾರ ಸಿದ್ಧವಾಗಿರಲಿಲ್ಲ. ಅಂದಿನ ಉಡುಪುಗಳನ್ನು ತೆಗೆದಿಟ್ಟಿರಲಿಲ್ಲ, ದಿನವಿಡೀ ಕಸಿವಿಸಿ. ಎಲ್ಲವೂ ಏರುಪೇರು. ಟ್ಯಾಗೋರರಿಗೆ ಬಹಳ ಸಿಟ್ಟುಬಂತು. ಸೇವಕ ಬಂದ ಮೇಲೆ ಅವನಿಗೆ ಕಠಿಣ ಶಿಕ್ಷೆ ನೀಡಬೇಕೆಂದು ತೀರ್ಮಾನಿಸಿದರು. ಸಂಜೆಯ ಹೊತ್ತಿಗೆ ಸೇವಕ ಬಂದ. ಏನೂ ಮಾತನಾಡದೇ ತಲೆಬಾಗಿ ನಿಂತಿದ್ದ. ಅವನ ಮೌನದಿಂದ ಟ್ಯಾಗೋರರ ಸಿಟ್ಟು ಹೆಚ್ಚಾಯಿತು. 'ಅಲ್ಲಿ ಸುಮ್ಮನೇಕೆ ನಿಂತಿದ್ದೀಯಾ? ಎಲ್ಲಿ ಸಾಯಲು ಹೋಗಿದ್ದೆ? ಅದನ್ನಾದರೂ ಬೊಗಳು' ಎಂದು ಗರ್ಜಿಸಿದರು. ಆತ ಮೆಲು ದನಿಯಲ್ಲಿ ಹೇಳಿದ. 'ನಿನ್ನೆ ರಾತ್ರಿ ನನ್ನ ಪುಟ್ಟ ಮಗಳು ತೀರಿಕೊಂಡಳೆಂಬ ಸುದ್ದಿ ಬಂತು. ನನಗೇನು ಮಾಡಲೂ ತೋಚಲಿಲ್ಲ. ನೀವು ಮಲಗಿದ್ದಿರಿ, ನಿಮ್ಮನ್ನೆಬ್ಬಿಸುವ ಧೈರ್ಯವಾಗಲಿಲ್ಲ. ನಾನು ನನ್ನ ಊರಿಗೆ ಹೋಗಿ ಆ ಮಗುವಿನ ಅಂತ್ಯಕ್ರಿಯೆ ಮುಗಿಸಿ, ಈಗ ಮರಳಿ ಬಂದಿದ್ದೇನೆ, ನನ್ನ ತಪ್ಪನ್ನು ಕ್ಷಮಿಸಿ' ಎಂದು ಹೇಳಿ ನಿಧಾನವಾಗಿ ಮನೆಯೊಳಕ್ಕೆ ಹೋದ. ತನ್ನ ಕಾರ್ಯದಲ್ಲಿ ತೊಡಗಿದ.



ಟ್ಯಾಗೋರರಿಗೆ ಒಮ್ಮೆಲೇ ಹೊಟ್ಟೆ ತೊಳಸಿದಂತಾಯಿತು. ಏನು ಮಾಡಲು ತೋಚಲಿಲ್ಲ. ವಿಷಯವೇನೆಂದು ವಿಚಾರಿಸದೆ ವಾಚಾಮಗೋಚರ ಬೈದದ್ದಕ್ಕಾಗಿ ಪಶ್ಚಾತ್ತಾಪವಾಯಿತು. ಅದೇ ಕೊನೆಯ ಬಾರಿ ಅವರು ತಮ್ಮ ಕೈಕೆಳಗೆ ಕೆಲಸ ಮಾಡುವವರ ಮೇಲೆ ರೇಗಿದ್ದು, ಕೂಗಾಗಿದ್ದು, ತನ್ನ ಕಿರಿಯ ಸೋದರನಿಗೆ ತೋರಬಹುದಾದ ಗೌರವವನ್ನು, ಪ್ರೀತ್ಯಾದಾರಗಳನ್ನು ಅವರು ಆತನ ಮೇಲೆ ತೋರುತ್ತಿದ್ದರಂತೆ. ■



ಶಶಿಧರ ಹಳೇಮನಿ

# ಅರವಟ್ಟಿಗೆ ವ್ಯವಸ್ಥೆ

■ ಬಾಲು ಪಟಗಾರ

ರಾಮು ಏಳನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿ. ಅವನಿಗೆ ಪ್ರಾಣಿ ಪಕ್ಷಿಗಳೆಂದರೆ ಬಹಳ ಪ್ರೀತಿ. ಪರಿಸರದ ಬಗ್ಗೆ ಅಷ್ಟೇ ಕಾಳಜಿಯನ್ನು ತೋರಿಸುತ್ತಿದ್ದ. ಪೆಟ್ಟಾದ ಪ್ರಾಣಿ ಪಕ್ಷಿಗಳನ್ನು ಕಂಡರೆ ಕಾಳಜಿಯಿಂದ ಉಪಚರಿಸುತ್ತಿದ್ದ. ಇದಕ್ಕೆಲ್ಲ ಪ್ರೇರಣೆ ಶಾಲೆಯಲ್ಲಿ ಶಿಕ್ಷಕರು ಕಲಿಸುತ್ತಿದ್ದ ಪರಿಸರದ ಪಾಠ, ಮತ್ತು ಅವರ ಮಾರ್ಗದರ್ಶನ ಕಾರಣವಾಗಿತ್ತು.

ಅದು ಬೇಸಿಗೆಕಾಲ; ಒಮ್ಮೆ ಶಿಕ್ಷಕರು ಪಾಠ ಮಾಡುತ್ತಾ, ಅರವಟ್ಟಿಗೆಗಳ ಬಗ್ಗೆ ವಿವರಿಸುತ್ತಿದ್ದರು. ಹಿಂದೆ ರಾಜ ಮಹಾರಾಜರು ಪ್ರಯಾಣಿಕರ ಅನುಕೂಲಕ್ಕಾಗಿ ಅಲ್ಲಲ್ಲಿ ಅರವಟ್ಟಿಗೆಗಳನ್ನು ಸ್ಥಾಪಿಸುತ್ತಿದ್ದರು. ಅರವಟ್ಟಿಗೆಗಳು ಅಂದರೆ ಕುಡಿಯುವ ನೀರಿನ ವ್ಯವಸ್ಥೆ. ಈ ಪಾಠ ರಾಮುವಿನ ಮೇಲೆ ತುಂಬಾ ಪರಿಣಾಮ ಬೀರಿತು. ಆದರೆ ಇಂದಿನ ಆಧುನಿಕ ಯುಗದಲ್ಲಿ ಮನುಷ್ಯರಿಗಿಂತ ಪ್ರಾಣಿ ಪಕ್ಷಿಗಳಿಗೆ ಅರವಟ್ಟಿಗೆಗಳ ಅವಶ್ಯಕತೆ ಇದೆ ಎಂದು ಅವನು ಮನಗಂಡನು.

ಸ್ವಲ್ಪ ದಿನಗಳ ನಂತರ ರಾಮುವಿನ ಶಿಕ್ಷಕರು, ಯಾವುದೋ ಕಾರಣಕ್ಕೆ ರಾಮುವಿನ ಮನೆ ಕಡೆ ಹೋದಾಗ, ಅಲ್ಲಿಯ ವ್ಯವಸ್ಥೆಯನ್ನು ನೋಡಿದಾಗ ಆಶ್ಚರ್ಯವೂ, ಸಂತೋಷವೂ ಆಯಿತು. ಅವನು ತನ್ನ ಮನೆಯ ಸುತ್ತ ಮುತ್ತ ಪ್ರಾಣಿಗಳಿಗೆ, ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದ. ಪಕ್ಷಿಗಳು ಚಿಲಿಪಿಲಿಗುಡುತ್ತ ನೀರು ಕುಡಿಯುವ ದೃಶ್ಯ ಅವರಿಗೆ ಖುಷಿಯನ್ನುಂಟುಮಾಡಿತ್ತು. ಶಿಕ್ಷಕರು ಈ ಕೆಲಸಕ್ಕೆ ರಾಮುವನ್ನು ಅಭಿನಂದಿಸಿದರು.ಆಗ ರಾಮು 'ಸರ್, ಈ ಕೆಲಸಕ್ಕೆ ನನಗೆ ನಿಮ್ಮ ಪಾಠವೇ ಪ್ರೇರಣೆ.' ಎಂದು ಅವರಿಗೆ ವಂದಿಸಿದನು.

ನೀತಿ: ನಾವು ಬದುಕುವುದರ ಜೊತೆಗೆ ಪ್ರಾಣಿ ಪಕ್ಷಿಗಳಿಗೂ ಬದುಕಲು ಅವಕಾಶ ಮಾಡಿಕೊಡಬೇಕು. ■